# ಹನುಮಂತ ದೇವ ನಮೋ

1. **Ref.:** Shri Purandara Dasara Sahitya Part – 1, Pooja Tatva, edited by Shri Betageri Krishna Sharma and Shri Bengeri Huchhu Rayaru.
2. **Ref.:** Purandara Sahitya Darshana, Samputa 2, Adhyatma Darshana edited by Prof. S.K. Ramachandra Rao
3. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi
4. **Note:** Lyrics given without highlights are as per Ref. 2 and the wordings given in yellow highlights are as per Ref. 1. There are slight differences and so they are given separately. In Ref. 3 the lyrics are different and are not considered here.
5. **Note:** Singer has followed lyrics as in Ref. 2.

| | |
|---|---|
| ರಾಗ: ಭೂಪಾಳಿ ತಾಳ: ಅಟ್ಟ | ರಾಗ: ಸೌರಾಷ್ಟ್ರ ತಾಳ: ಝಂಪೆ |
| | |
| ಹನುಮಂತ ದೇವ ನಮೋ ‖ ಪ ‖ | ಹನುಮಂತ ದೇವ ನಮೋ |
| ವನಧಿಯನು ದಾಟಿ ರಾವಣನ ದಂಡಿಸಿದೆ ‖ ಅಪ ‖ | ವನಧಿಯನು ದಾಟಿ ರಾವಣನ ದಂಡಿಸಿದೆ |
| | |
| ಅಂಜನೆಯ ಗರ್ಭದಿಂದುದಿಸಿ ನೀ ಮೆರೆದೆಯೋ | ಅಂಜನೆಯ ಆತ್ಮದಿಂದುದಿಸಿ ನೀ ಮೆರೆದೆಯೋ |
| ಕಂಜಸಖ ಮಂಡಲಕೆ ಕೈ ದುಡುಕಿದೆ | ಕಂಜಸಖ ಮಂಡಲಕೆ ಕೈ ದುಡುಕಿದೆ |
| ಭುಂಜಿಸೀರೇಳು ಜಗಂಗಳನು ಉಳುಹಿದೆ ಪ್ರ - | ಭುಂಜಿಸೀರೇಳು ಜಗಂಗಳನು ಉಳುಹಿದೆ ಪ್ರ - |
| ಭಂಜನಾತ್ಮಕ ಗುರುವೆ ಸರಿಗಾಣೆ ನಿನಗೆ ‖ 1 ‖ | ಭಂಜನಾತ್ಮಜ ಗುರುವೆ ಸರಿಗಾಣೆ ನಿನಗೆ |
| | |
| ಹೇಮಕುಂಡಲ ಹೇಮ ಯಜ್ಞೋಪವೀತಧರ | ಹೇಮಕುಂಡಲ ಹೇಮ ಯಜ್ಞೋಪವೀತಖಿಳ |
| ಕಟಿಸೂತ್ರ ಕೌಪೀನವನು ಧರಿಸಿ | ಹೇಮ ಕಟಿಸೂತ್ರ ಕೌಪೀನಧಾರಿ |
| ರೋಮ-ರೋಮಕೆ ಕೋಟಿ ಲಿಂಗ ಸರ್ವಾಂಗ | ರೋಮ ಕೋಟಿಲಿಂಗ ಸ್ವರ ಶ್ಯಾಮಲವರ್ಣ |
| ರಾಮ ಭೃತ್ಯನೆ ನಿನಗೆ ಸರಿಗಾಣೆ ಗುರುವೆ ‖ 2 ‖ | ರಾಮ ಭೃತ್ಯನೆ ನಿನಗೆ ಸರಿಗಾಣೆ ಗುರುವೆ |
| | |
| ಅಕ್ಷಯ ಕುಮಾರಕನ ನಿಕ್ಕರಿಸಿ ಬಿಸುಟು ನೀ | ರಾಮ ಲಕ್ಷ್ಮಣರ ಕಂಡಾಳಾಗಿ ನೀ ಮೆರೆದೆ |
| ರಾಕ್ಷಸರೊಳಗಧಿಕ ರಾವಣನ ರಣದಲ್ಲಿ | ಭೂಮಿಜೆಗೆ ಮುದ್ರೆಯುಂಗುರವನಿತ್ತೆ |
| ವಕ್ಷಸ್ಥಳ ಒಡೆದು ಮೂರ್ಛಿಸಿ ಬಿಸಾಟೆ ತ್ರಿಜಗ- | ಆ ಮಹಾ ಲಂಕಾ ನಗರವನೆಲ್ಲವನು ಸುಟ್ಟು |
| ರಕ್ಷಕನ ಶಿಕ್ಷಕ ಶ್ರೀ ರಾಮದಳರಕ್ಷ ‖ 3 ‖ | ಧೂಮಧಾಮವ ಮಾಡಿ ಆಳಿದೆಯೊ ಮಹಾತ್ಮ |
| | |
| ರಾಮ ಲಕ್ಷ್ಮಣರ ಕಟ್ಟಾಳಾಗಿ ನೀ ನಡೆದೆ | ಅಕ್ಷಯ ಕುಮಾರಕನ ನಿಟೊಪವರಿಸಿ |
| ಭೂಮಿಜೆಗೆ ಮುದ್ರೆಯುಂಗುರವನಿತ್ತೆ | ರಾಕ್ಷಾಧಿಪ ರಾವಣನು ರಣದಲಿ |

ಆ ಮಹಾ ಲಂಕೆ ನಗರವನೆಲ್ಲವನು ಸುಟ್ಟು
ಧೂಮಧಾಮವ ಮಾಡಿ ಮೆರೆದೆಯೋ ಮಹಾತ್ಮ || 4 ||

ವಕ್ಷಸ್ಥಳದಲ್ಲಿ ಶಿಕ್ಷಿಸಲು ಮೂರ್ಛೆಯ ಬಗೆಯ
ರಕ್ಷಿಸಿದೆ ರಕ್ಷಿಸಿದೆ ರಾಯ ಬಲವಂತ

ಶ್ರೀಮಧ್ವಾಚಾರ್ಯರ ಕುಲದವನೆಂದೆನಿಸಿ
ಶ್ರೀ ಮಹಾಲಕುಮಿ ನಾರಾಯಣ ರೂಪ
ಶ್ರೀ ಮನೋಹರ ಪುರಂದರ ವಿಠಲ ರಾಯನ
ಪ್ರೇಮದಾಳು ಹನುಮಂತ ಬಲವಂತ || 5 ||

ಶ್ರೀಮಧ್ವಾಚಾರ್ಯ ಕುಲದವನೆಂದೆನಿಸಿದೆಯ್ಯ
ಶ್ರೀ ಮಹಾಲಕುಮಿ ನಾರಾಯಣಾಖ್ಯ
ಶ್ರೀ ಮನೋಹರ ಪುರಂದರ ವಿಠಲ ರಾಯನ
ಸೌಮ್ಯ ಮನದಾಳು ಹನುಮಂತ ಬಲವಂತ

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿ:**

**ವನಧಿಯನ್ನು** – ಸಮುದ್ರವನ್ನು.

**ಅಂಜನೆಯ** – ಅಂಜನಿಯ; ವಿವರಣೆ ಆಗಲೆ ಬಂದಿದೆ.

**ಅಂಜನೆಯ ಆತ್ಮದಿಂದುದಿಸಿ : -** ಸುಮೇರು ದೇಶದ ರಾಜನಾದ ಕೇಸರಿಯ ಹಾಗು ಗೋತಮ ಕನ್ಯೆಯಾದ ಅಂಜನೆಯ ಮಗ. ವಾಯುವಿನ ಅಂಶದಿಂದ **ಅಂಜನೆಯಲ್ಲಿ ಚೈತ್ರ ಶುದ್ಧ ಪೂರ್ಣಿಮೆಯ ದಿನ ಹುಟ್ಟಿದನು.**

**ಕಂಜಸಖ ಮಂಡಲಕೆ** – ತಾವರೆಯ ಸ್ನೇಹಿತ, ಸೂರ್ಯ; ಅವನ ಮಂಡಲ. ಹನುಮಂತನು ಮಗುವಾಗಿರುವಾಗಲೇ ಸೂರ್ಯಮಂಡಲವನ್ನು ಹಣ್ಣೆಂದು ಬಗೆದು ತಿನ್ನಲು ತೊಡಗಿದನೆಂದು ಕತೆ.

**ಭುಂಜಿಸಿ ಈರೇಳು ಜಗಂಗಳನು** – ಸಮುದ್ರಮಥನ ಸಂದರ್ಭದಲ್ಲಿ ಹೊರಬಂದ ಕಾಲ–ಕೂಟ ವಿಷವನ್ನು ಉಂಡು ಹದಿನಾಲ್ಕು ಲೋಕಗಳನ್ನು ಕಾಪಾಡಿದೆ; ಇಲ್ಲಿ ಹನುಮಂತನು ರುದ್ರಾತ್ಮಕನೆಂಬುದು ಹಿನ್ನೆಲೆ.

**ಪ್ರಭಂಜನ** – ವಾಯುದೇವರ ಹೆಸರು.

**ಹೇಮಕುಂಡಲ...** – ಹನುಮಂತನು ಹುಟ್ಟುವಾಗಲೇ ಬಂಗಾರದ ಕಿವಿಯೋಲೆ, ಜನಿವಾರ, ಉಡಿದಾರ, ಕೌಪೀನಗಳನ್ನು ಧರಿಸಿದ್ದನೆಂದು ಕತೆ.

**ರೋಮರೋಮಕೆ ಕೋಟಿಲಿಂಗ** – ಯುಧಿಷ್ಠಿರನ ರಾಜಸೂಯ ಯಾಗಕ್ಕೆ ಪುರುಷಾ ಮೃಗವನ್ನು ಕರೆತರಲು ಹೊರಟ ಭೀಮನು ದಾರಿಯಲ್ಲಿ ಹನುಮಂತನಿಂದ ಅವನ ಮೈಗೂದಲುಗಳನ್ನು ಪಡೆದನೆಂದೂ, ಅವನ್ನು ಹಸ್ತಿನಾವತಿಯವರೆಗೆ ಚೆಲ್ಲಲು, ರುದ್ರಾಂಶದ ಹನುಮಂತನ ಒಂದೊಂದು ರೋಮದಿಂದಲೂ ಕೋಟಿ ಲಿಂಗಗಳು ತೋರಿಕೊಂಡುವೆಂದೂ, ಶಿವಭಕ್ತನಾದ ಪುರುಷಾಮೃಗವು ಈ ಲಿಂಗಗಳನ್ನು ಪೂಜೆ ಮಾಡುತ್ತ ಮಾಡುತ್ತ ಹಸ್ತಿನಾಪುರಕ್ಕೆ ಬಂದಿತೆಂದೂ ಕತೆ. ಈ ಕತೆಗೆ ಆಧಾರವೇನೋ ತಿಳಿಯದು.

**ಅಕ್ಷಯ ಕುಮಾರನ** – ಯುದ್ಧದಲ್ಲಿ ರಾವಣನ ಮಗನಾದ ಅಕ್ಷಯ ಕುಮಾರನನ್ನು ಹನುಮಂತನು ಕೊಂದನು.

**ತ್ರಿಜಗರಕ್ಷಕನ ಶಿಕ್ಷಕ** – ಸಂದರ್ಭ ತಿಳಿಯುವುದಿಲ್ಲ.

**ಭೂಮಿಜೆಗೆ** – ಸೀತೆಗೆ.

**ಧಾಮಧೂಮವ ಮಾಡಿ** – ಮರಾಠಿಯ 'ಧಾಮ್‌ಧೂಮ್' ಕನ್ನಡದಲ್ಲಿಯೂ ಬಳಕೆಯಲ್ಲಿದೆ, ನಾಶಮಾಡು ಎಂಬರ್ಥದಲ್ಲಿ. 'ಧಾಮ'ವೆಂದರೆ ಮನೆ, 'ಧೂಮ'ವೆಂದರೆ ಹೊಗೆ. ಮನೆಯನ್ನು ಸುಟ್ಟು ಹೊಗೆಯಾಡಿಸುವುದೆಂದು ಅಕ್ಷರಾರ್ಥ.

**ಶ್ರೀಮದಾಚಾರ್ಯರ ಕುಲದವನೆಂದೆನಿಸಿ** – ಹಂಸನಾಮಕ ಪರಮಾತ್ಮನಿಂದ ಅಚ್ಯುತಪ್ರೇಕ್ಷ ತೀರ್ಥರವರೆಗೆ ಬಂದ ಆಚಾರ್ಯಪರಂಪರೆಯನ್ನು ಇಲ್ಲಿ 'ಆಚಾರ್ಯಕುಲ'ವೆಂದು ಕರೆದಿದ್ದಾರೆ. ಮಧ್ವಾಚಾರ್ಯರು ಅಚ್ಯುತಪ್ರೇಕ್ಷರ ಶಿಷ್ಯರಾಗಿ ಅದೇ ಕುಲದವರಾದರು.

**Classification:** Keerthane
**Ankita:** purandara vittala
**Location:** NA
**Category:** Hanuma Stuti,
**Sub-Category:** hanuma, kaadu, padma, surya, rama, asura, ravana, bhUmi, sita, ungura, lanka, madhva, madhwacharya, Narayana, Lakshmi, manohara, prema, langoti,
**Pravachana:** NA
**Explanation:** NA